**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ. ಎಲ್. ಅನೀಲ್ ಕುಮಾರ್**
**ರವರ ನಿಯಮ 72ರ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಪ್ರಶ್ನೆ :** **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:183ರ ವ್ಯಾಪ್ತಿಯಲ್ಲಿ ಬರುವ, ಚಿಕ್ಕಲಸಂದ್ರದಲ್ಲಿರುವ ರಾಮಾಂಜನೇಯನಗರದ 2ನೇ ಮುಖ್ಯ ರಸ್ತೆ, 7ನೇ ಅಡ್ಡರಸ್ತೆ ಸಮೀಪದಲ್ಲಿರುವ (ಬಸ್ ನಿಲ್ದಾಣದ ಎದುರು) ರಸ್ತೆಯಲ್ಲಿ ನೋಂದಣಿ ಸಂಖ್ಯೆ ಇಲ್ಲದ, ಅನಧಿಕೃತವಾಗಿ ದ್ವಿಚಕ್ರ ಹಾಗೂ ಗೂಡ್ಸ್ ಗಾಡಿಗಳನ್ನು ಹಲವು ವರ್ಷಗಳಿಂದ ಪಾರ್ಕಿಂಗ್ ಮಾಡಿರುವುದರಿಂದ ನಿಂತಲ್ಲೇ ನಿಂತಿದ್ದು, ಇವುಗಳನ್ನು ತೆರವು ಮಾಡಲು ಯಾವುದೇ ಕ್ರಮ ಕೈಗೊಳ್ಳದ ಕಾರಣ ರಸ್ತೆಯಲ್ಲಿ ಸಂಚಾರ ದಟ್ಟನೆಯಾಗುತ್ತಿರುವುದಲ್ಲದೆ ಸದರಿ ವಾಹನಗಳ ಮಧ್ಯೆ ಪುಂಡರ ಹಾವಳಿಯು ಹೆಚ್ಚಾಗಿರುತ್ತದೆ ಇದರಿಂದಾಗಿ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಭಯದಿಂದ ಸಂಚರಿಸುವಂತಾಗಿರುತ್ತದೆ. ಆದುದರಿಂದ ಸದರಿ ರಸ್ತೆಯಲ್ಲಿ ಅನಗತ್ಯವಾಗಿ ಪಾರ್ಕಿಂಗ್ ಮಾಡಿರುವ ವಾಹನಗಳ ತೆರವುಗೊಳಸಿಸುವುದರೊಂದಿಗೆ ಪುಂಡರ ಹಾವಳಿಯನ್ನು ತಪ್ಪಿಸಿ ನಿರ್ಭಿತಿಯಿಂದ ಸಂಚರಿಸಲು ಅಗತ್ಯ ಕ್ರಮ ಕೈಗೊಳ್ಳುವುದರ ಕುರಿತು.**

**ಉತ್ತರ:** ಸುಬ್ರಮಣ್ಯಪುರ ಪೊಲೀಸ್ ಠಾಣಾ ಸರಹದ್ದಿನ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂ.183ರ ವ್ಯಾಪ್ತಿಯಲ್ಲಿ ಬರುವ ಚಿಕ್ಕಲಸಂದ್ರದಲ್ಲಿರುವ ರಾಮಾಂಜನೇಯ ನಗರದ 2ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ ಸಮೀಪದಲ್ಲಿರುವ ಸ್ಥಳದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೋ ಪಾರ್ಕಿಂಗ್ ಸ್ಥಳಗಳಲ್ಲಿ ನಿಲ್ಲಿಸಿದ್ದ ವಾಹನಗಳ ಮಾಲೀಕರ ವಿರುದ್ಧ ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣೆಯವರು ಸುಮಾರು 430 ಪ್ರಕರಣಗಳನ್ನು ದಾಖಲಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿರುತ್ತಾರೆ. ಸದರಿ ಸ್ಥಳದ ರಸ್ತೆಯ ಅಕ್ಕಪಕ್ಕದಲ್ಲಿ ನಿಲ್ಲಿಸಿದ್ದ ವಾಹನಗಳು ಶ್ರೀ ವೆಂಕಟೇಶ್ವರ ಬೈಕ್ ಸರ್ವೀಸ್‌ಗೆ ಸೇರಿದ ವಾಹನಗಳಾಗಿದ್ದು, ಸದರಿ ವಾಹನಗಳನ್ನು ತೆರವುಗೊಳಿಸಿ, ಮಾಲೀಕರ ವಿರುದ್ಧ ಸುಗಮ ಸಂಚಾರಕ್ಕೆ ತೊಂದರೆಪಡಿಸಿದ ಬಗ್ಗೆ ಕಲಂ. 285 ಬಿಎನ್‌ಎಸ್ ರೀತ್ಯ ಪ್ರಕರಣ ದಾಖಲಿಸಿ ಕ್ರಮ ಕೈಗೊಂಡು ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿರುತ್ತಾರೆ.

ಮೇಲ್ಕಂಡ ಸ್ಥಳದಲ್ಲಿ ಪುಂಡರ ಹಾವಳಿಯ ಬಗ್ಗೆ ಸ್ಥಳೀಯ ಮಹಿಳೆಯರಾಗಲೀ ಅಥವಾ ಸ್ಥಳೀಯರಾಗಲೀ ಇದುವರೆಗೂ ಯಾವುದೇ ದೂರನ್ನು ನೀಡಿರುವುದಿಲ್ಲ. ಮುಂದಿನ ದಿನಗಳಲ್ಲಿ ಯಾವುದೇ ದೂರುಗಳು ಬಂದಲ್ಲಿ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು. ಹೊಯ್ಸಳ, ಬೀಟ್ ಸಿಬ್ಬಂದಿಗಳು ಹಾಗೂ ಗಸ್ತು ಅಧಿಕಾರಿಗಳು ಆಗಿಂದಾಗ್ಗೆ ಸದರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗುತ್ತಿರುತ್ತದೆ.

ಸದರಿ ಸ್ಥಳದ ಸುತ್ತಮುತ್ತ ಪ್ರಸ್ತುತ ಸಾಲಿನಲ್ಲಿ 05 ಜನ ಆಸಾಮಿಗಳ ವಿರುದ್ಧ ಕಲಂ. 4 ಕೋಟ್ಪಾ ಕಾಯ್ದೆ ಅನ್ವಯ ದಂಡವನ್ನು ವಿಧಿಸಿ ಕ್ರಮ ಕೈಗೊಂಡಿರುತ್ತದೆ. ಹಾಗೂ ಮೇಲಾಧಿಕಾರಿಗಳ ಆದೇಶದ ಮೇರೆಗೆ ಮನೆ-ಮನೆಗೆ ಪೊಲೀಸ್ ವ್ಯವಸ್ಥೆಯ ಅನುಗುಣವಾಗಿ ಸದರಿ ಸ್ಥಳದ ಸುತ್ತಮುತ್ತಲಿನ ಪ್ರದೇಶಗಳ ಮನೆಗಳಿಗೆ ಠಾಣೆಯ 11ನೇ ಬೀಟ್‌ನ ಸಿಬ್ಬಂದಿ ಹಾಗೂ ಉಸ್ತುವಾರಿ ಪಿಎಸ್‌ಐ ರವರು ಭೇಟಿ ನೀಡುತ್ತಿದ್ದು, ಪುಂಡರ ಹಾವಳಿಯ ಬಗ್ಗೆ ಮಹಿಳೆಯರಾಗಲೀ,

ವೃದ್ಧರಾಗಲೀ ಹಾಗೂ ಸ್ಥಳೀಯರಾಗಲೀ ಯಾವುದೇ ದೂರು ನೀಡಿರುವುದಿಲ್ಲ. ಆದಾಗ್ಯೂ ಮುಂದಿನ ದಿನಗಳಲ್ಲಿ ಯಾವುದೇ ಸಾರ್ವಜನಿಕರು ದೂರು ನೀಡಿದಲ್ಲಿ ಅಗತ್ಯ ಕಾನೂನು ಕ್ರಮ ಕೈಗೊಳ್ಳಲಾಗುವುದು.

ರಾಮಾಂಜನೇಯ ನಗರದ 7ನೇ ಕ್ರಾಸ್ ರಸ್ತೆಯು ಜನ ವಸತಿ ಪ್ರದೇಶದ ರಸ್ತೆಯಾಗಿರುತ್ತದೆ. ಈ ಪ್ರದೇಶದ ಸುತ್ತಮುತ್ತಲಿನ ಪ್ರದೇಶದಲ್ಲಿ 2025ನೇ ಸಾಲಿನಲ್ಲಿ ಒಟ್ಟು 430 ನೋಪಾರ್ಕಿಂಗ್ ಪ್ರಕರಣಗಳನ್ನು ದಾಖಲು ಮಾಡಲಾಗಿದ್ದು, ಅನಧಿಕೃತ ವಾಹನಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ.

ಈ ಪ್ರದೇಶದ ಸುತ್ತಮುತ್ತಲಿನ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾದಾಗ, ಸಂಚಾರ ವಿಭಾಗದ ಅಧಿಕಾರಿ ಮತ್ತು ಕೋಬ್ರಾ ಸಿಬ್ಬಂದಿಗಳನ್ನು ನಿಯೋಜಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ.

---

ಹೆಚ್‌ಡಿ 426 ಎಸ್‌ಎಸ್‌ಟಿ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು